ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 10.08.2023.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಂ.ವಿ.ಇ. ವಕೀಲರಿಂದಃ

ದಾವಾ ಸ್ವತ್ತಿನ 4 ಚೆಕ್‌ಬಂದಿಯಲ್ಲಿ ಹಾಗೂ ನಿಪಿ-5 ರಲ್ಲಿ ಪ್ರತಿವಾದಿಗಳ ಯಾವುದೇ ಹೆಸರು ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್‌ಬಂದಿಯಲ್ಲಿ ತೋರಿಸಿರುವವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲಾ ಎಂದರೆ ಸರಿ. ದಾವಾ ಸ್ವತ್ತಿನ 4 ಚೆಕ್‌ಬಂದಿಯಲ್ಲಿ ಪ್ರತಿವಾದಿಯರ ಯಾವುದೇ ಜಮೀನು ಇಲ್ಲಾ ಎಂದರೆ ಸರಿ. ಪ್ರತಿವಾದಿಗಳು ನನ್ನ ಜಮೀನನ್ನು ಅತೀಕ್ರಮಣ ಮಾಡಿಕೊಂಡಿರುತ್ತಾರೆ ಎಷ್ಟು ವಿಸ್ತೀರ್ಣದ ಜಮೀನನ್ನು ಅತೀಕ್ರಮಿಸಿಕೊಂಡಿತ್ತಾರೆ ಎಂದು ನನಗೆ ಗೊತ್ತಿಲ್ಲಾ. ಈ ದಾವೆಯನ್ನು ಪ್ರತಿವಾದಿಯರು ಅತೀಕ್ರಮಿಸಿಕೊಂಡ ಜಮೀನನ್ನು ತೆರವು ಗೊಳಿಸಲು ಹಾಗೂ ಕಬ್ಜೆ ಪಡೆಯಲು ನಾನು ಈ ದಾವೆ ಸಲ್ಲಿಸಿರುತ್ತೇನೆ.

ಪ್ರತಿವಾದಿಗಳು ನನ್ನ ಜಮೀನನ್ನು ಅತೀಕ್ರಮಿಸಿಕೊಂಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲಾ. ಸಾಮಾನ್ಯವಾಗಿ ನನ್ನ ಜಮೀನನ ಪಕ್ಕದಲ್ಲಿ ಬೇರೆಯವರ ಜಮೀನು ಇದ್ದರೆ, ಅದನ್ನು ಅತೀಕ್ರಮಿಸಲು ಬರುತ್ತದೆ, ಒಂದು ವೇಳೆ ಅಲ್ಲಿ ಬರದೇ ಇದ್ದಲ್ಲಿ ಅತೀಕ್ರಮಿಸಲು ಸಾಧ್ಯವಿಲ್ಲ ಎಂದರೆ ಸರಿ. ಫಾರಂ ನಂ.10, ಪಹಣಿ, ಆಕಾರಬಂದ್ ಇದ್ದರೆ ಮಾತ್ರ ಜಮೀನು ನೋಂದಾಗುತ್ತದೆ ಎಂದರೆ ಸಾಕ್ಷಿ ನಾನು ಖರೀದಿಸುವ ಕಾಲಕ್ಕೆ ಸಂಬಂಧಪಟ್ಟ ಇಲಾಖೆಯವರು ನನಗೆ ಯಾವುದೇ ದಾಖಲೆ ಕೇಳಿಲ್ಲಾ, ಆದರೆ ಪಹಣಿ ಕೇಳಿರುತ್ತಾರೆ ಎಂದು ನುಡಿಯುತ್ತಾರೆ.

ಸದ್ಯ ಯಾವುದೇ ಜಮೀನನ್ನು ನೋಂದಣಿ ಮಾಡಲು ಹೋಗಬೇಕಾದರೆ ಫಾರಂ ನಂ.10, ಪಹಣಿ, ಆಕಾರಬಂದ್ ಇದ್ದರೆ ಮಾತ್ರ ನೋಂದಾಗುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ನನ್ನ ಮಾರಾಟಗಾರರ ಹೆಸರಿನಲ್ಲಿ ಫಾರಂ ನಂ.10, ಪಹಣಿ, ಆಕಾರಬಂದ್ ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಮಾಹಿತಿ ಇಲ್ಲಾ, ಆದರೆ ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವತ್ತು ನನ್ನ ಮಾರಾಟಗಾರರ ಹೆಸರಿನಲ್ಲಿ ಸರ್ವೆ ಇಲಾಖೆಯಲ್ಲಿ ದಾಖಲೆಗಳು ಇಲ್ಲಾ ಎಂದರೆ ಸರಿಯಲ್ಲ.

ನಾನು ಮೊದಲಿನ ಫಾರಂ ನಂ.10 ರದ್ದುಗೊಳಿಸುವ ಸಲುವಾಗಿ ಹಾಗೂ ಹೊಸ ಫಾರಂ ನಂ.10 ನ್ನು ತಯಾರಿಸುವ ಸಲುವಾಗಿ ಡಿಡಿಎಲ್ಆರ್ ಕಛೇರಿಗೆ ಅಪೀಲು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ನನ್ನ ಅಪೀಲು ವಜಾಯಾಗಿದೆ ಎಂದರೆ ನನಗೆ ಗೊತ್ತಿಲ್ಲಾ.

ಸದರಿ ಡಿಡಿಎಲ್ಆರ್ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನನ್ನ ಅಪೀಲನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಡಿಡಿಎಲ್ಆರ್ ಕಛೇರಿಯ ಅಪೀಲು ಏನಾಗಿದೆ ಎಂದು ನನಗೆ ಗೊತ್ತಿಲ್ಲಾ. ಪ್ರತಿವಾದಿಗಳು ನಾನು ಸಲ್ಲಿಸಿದ ಅಪೀಲು ವಜಾಯಾಗಿದೆ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ.

ಪ್ರತಿವಾದ ಪತ್ರದಲ್ಲಿರುವ ಹಾಗೂ ಸರ್ವೆ ಮಾಡಲು ಸಲ್ಲಿಸಿದ ಅರ್ಜಿಗೆ ಏನೂ ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಗಳು ತಮ್ಮ ವಕೀಲರ ಮುಖಾಂತರ ಸಲ್ಲಿಸಿದ ತಕರಾರಿನ ಸಂಗತಿಗಳನ್ನು ನನ್ನ ವಕೀಲರು ನನಗೆ ಓದಿ ಹೇಳಿಲ್ಲಾ. ಎಡಿಎಲ್ಆರ್ ರವರು 2003 ಮತ್ತು 2004 ರಲ್ಲಿ ಸರ್ವೆ ನಂ.220 ರಲ್ಲಿ 5 ಹಿಸ್ಸಾಗಳನ್ನು ಮಾಡಿ, ತದನಂತರ ಫಾರಂ ನಂ.10 ನ್ನು ತಯಾರಿಸಿದ್ದು, ಅದನ್ನು ಪ್ರಶ್ನೀಸಿ ನಾನು ಡಿಡಿಎಲ್ಆರ್ ಕಛೇರಿಗೆ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ನಾನು ಡಿಡಿಎಲ್ಆರ್ ಕಛೇರಿಗೆ ಅಪೀಲು ಸಲ್ಲಿಸಿದ್ದರ ಬಗ್ಗೆ ನನ್ನ ವಕೀಲರಿಗೆ ಈ ದಾವೆ ಮಾಡುವ ಪೂರ್ವದಲ್ಲಿ ತಿಳಿಸಿದ್ದೆ.

ದಾವಾ ಸ್ವತ್ತಿನ ಸರ್ವೆ ನಂ.220/4 ಬರಿ 1 ಎಕರೆ 4 ಗುಂಟೆ ಇದ್ದು, ಅದು ಕೂಡಾ ಭೋಜು ಹೋಬು ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.220/5 ರ ಜಮೀನು 11 ಎಕರೆ 5 ಗುಂಟೆ ಇದು ಕರ್ನಾಟಕ ರಾಜ್ಯಪಾಲರ ಪರವಾಗಿ ಪುರಸಭೆ ಆಳಂದ ಹಾಗೂ ಕಾರ್ಯನಿರ್ವಾಹಕ ಅಭೀಯಂತರರು ನೀರು ಪೂರೈಕೆ ಹಾಗೂ ಒಳಚರಂಡಿ ಕಮೀಟಿ ಕಲಬುರಗಿ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲಾ. ದಾವಾ ಸ್ವತ್ತಿನ ಹಿಸ್ಸಾ ನಂ.4

ನಾನು ಯಾರಿಂದ ಖರೀದಿಸಿರುತ್ತೇನೋ ಅವರ ಹೆಸರಿನಲ್ಲಿ ಇಲ್ಲಾ ಎಂದರೆ ಸರಿಯಲ್ಲ. 2003-04 ನೇ ಸಾಲಿನಲ್ಲಿ ಎಡಿಎಲ್‌ಆರ್ ರವರು ಫಾರಂ ನಂ.10 ನ್ನು ತಯಾರಿಸುವ ಕಾಲಕ್ಕೆ ನನ್ನ ಮಾರಾಟಗಾರ ಗುರುರಾಜ ಜ್ಯೊಶಿ ರವರು ಯಾವುದೇ ರೀತಿ ಕಬ್ಜೆ ಇರುವುದಿಲ್ಲ ಎಂದು ಅವರ ಹೆಸರನ್ನು ತೆಗೆದುಹಾಕಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಗುರುರಾಜ ಜ್ಯೊಶಿ ರವರು ಫಾರಂ ನಂ.10 ನ್ನು ತಯಾರಿಸುವ ಕಾಲಕ್ಕೆ ತಾವು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಾರಾಟಗಾರ ಯಾವತ್ತು ದಾವಾ ಸ್ವತ್ತಿನ ಮಾಲಿಕ ಮತ್ತು ಕಬ್ಜೆದಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನನ್ನ ಮಾರಾಟಗಾರ ಯಾವುತ್ತು ದಾವಾ ಸ್ವತ್ತಿನ ಮಾಲಿಕ ಮತ್ತು ಕಬ್ಜೆದಾರ ಇರುವುದಿಲ್ಲ ಎಂಬ ಸಂಗತಿ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಡಿಡಿಎಲ್‌ಆರ್ ಕಛೇರಿಯಲ್ಲಿ ಆದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲಾ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**